# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ 429/2014

ಸಿ.ಡಬ್ಲ್ಯೂ- 2
ಪಿ.ಡಬ್ಲ್ಯೂ- 4

**ದಿನಾಂಕಃ 15-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಲಕ್ಷ್ಮಣ ಭಜಂತ್ರಿ |
| ತಂದೆಯ/ಗಂಡನ ಹೆಸರು | : ರಾಮಪ್ಪ |
| ವಯಸ್ಸು | : 54 ವರ್ಷ |
| ಉದ್ಯೋಗ | : ಪ್ರಭಾರಿ ಮುಖ್ಯ ಶಿಕ್ಷಕರು |
| ವಾಸ ಸ್ಥಳ | : ಕುಲಗೋಡ |
| ತಾಲೂಕು | : ಮೂಡಲಗಿ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-**

ದಿಃ 10-12-2011 ರಂದು ನಾನು ಹಾಗೂ ಚಾಸಾ 3 ನಮಗೆ ಕುಲಗೋಡ ಪೊಲೀಸರು ಠಾಣೆಗೆ ಕರೆಸಿ ಅಲ್ಲೆ ಚಾಸಾ 10 ರವರು 3 ಸರಕಾರಿ ನಗದು ಪುಸ್ತಕ ಹಾಗೂ 2 ಅರೇ ಸರಕಾರಿ ನಗದು ಪುಸ್ತಕಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಪೊಲೀಸರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಜಪ್ತಿ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು. ಸದರಿ ಕ್ಯಾಶ ಪುಸ್ತಕಗಳ ಜಪ್ತಿ ಪಂಚನಾಮೆ ಮಾಡಿ ಜಾಗಾದಲ್ಲಿ ಬರೆದು, ಓದಿ ಹೇಳಿ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ಜಪ್ತಿ ಪಂಚನಾಮೆಯನ್ನು ನಿಪಿ- 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ- 13(ಎ) ಎಂದು ಗುರುತಿಸಲಾಯಿತು. ಸರಕಾರಿ ನಗದು ಪುಸ್ತಕ ಮತ್ತು ಅರೆ ಸರಕಾರಿ ನಗದು ಪುಸ್ತಕಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ- 14 ರಿಂದ ನಿಪಿ- 18 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ- 14(ಎ) ರಿಂದ ನಿಪಿ- 18(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ Sri.DSR ವಕೀಲರಿಂದಃ**

ನನ್ನ ಊರು ಬಿಜಗುಪ್ಪಿ ಗ್ರಾಮ ರಾಮದುರ್ಗ ತಾಲೂಕು ಇರುತ್ತದೆ. ನಾನು 28 ವರ್ಷಗಳಿಂದ ಕೇಳಕರ ಪ್ರೌಢಶಾಲೆಯಲ್ಲಿ ಹಿಂದಿ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿರುತ್ತೇನೆ. ನಾನು ಹಿಂದಿ ಶಿಕ್ಷಕನಾಗಿ ಹೊಸದಾಗಿ ಸೇರಿಕೊಂಡಾಗ ಮುಖ್ಯೋಪಾದ್ಯಾಯರಾಗಿ ಆರ್ ಬಿ ಕಂಚಿ ಇದ್ದರು ಅವರ ನಂತರ ಎಮ್ ಎಮ್ ಎಲಿಗಾರ ನಂತರ ಆರೋಪಿ ವಿ ಯು ರಡೇರಟ್ಟಿ ಇದ್ದರು. ಕೇಳಕರ ಪ್ರೌಢಶಾಲೆ ಆಡಳಿತ ಮಂಡಳಿಗೂ ಮತ್ತು ಆರೋಪಿಗೂ ಸಂಬಂಧ ಚೆನ್ನಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ14 ರಿಂದ ನಿಪಿ18 ಪುಸ್ತಕ ಮತ್ತು ಫೈಲಗಳನ್ನು ಯಾರ ಕಡೆಯಿಂದ ತಂದಿರುತ್ತಾರೆಂದು ಪರುಶೆಟ್ಟಿಯವರನ್ನು ಕೇಳಿರಿ ಎಂದರೆ ಸಾಕ್ಷಿಯು ನಾನು ಕೇಳಿಲ್ಲ ಎಂದು ನುಡಿಯುತ್ತಾರೆ. ನಾನು ಮಹಾಜರಗೆಂದು ಸಹಿ ಮಾಡುವ

ಸಮಯದಲ್ಲಿ ಎಲ್ಲಿಂದ ತಂದಿರಿ ಎಂದು ನಾನು ಕೇಳಿಲ್ಲ. ಪಂಚನಾಮೆಯನ್ನು ಯಾವ ದಿನ ಮಾಡಿರುತ್ತಾರೆಂದು ದಿನಾಂಕ ನನಗೆ ಈಗ ನೆನಪಿಲ್ಲ. ಪಂಚನಾಮೆಯಲ್ಲಿನ ವಿಷಯ ನಾನು ಓದಿ ನೋಡಿಲ್ಲ. ಪೊಲೀಸರು ಸಹಿ ಮಾಡು ಅಂದಿಂದಕ್ಕೆ ನಾನು ಮಾಡಿರುತ್ತೇನೆಂದರೆ ಸರಿ. ಆಡಿಟ್ ರಿಪೋರ್ಟ ಆಗಿ 15 ತಿಂಗಳ ನಂತರ ಪುಸ್ತಕಗಳನ್ನು ಜಪ್ತು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಪುಸ್ತಕಗಳೆಲ್ಲ ಪರುಶೆಟ್ಟಿಯವರ ಹತ್ತಿರ ಇದ್ದವು ಎಂದರೆ ಸರಿ. ಪರುಶೆಟ್ಟಿಯವರು ಕೇಳಕರ ಸಂಸ್ಥೆಯ ಆಡಳಿತ ಮಂಡಳಿಯ ಮಾತು ಕೇಳಿ ಸುಳ್ಳು ಲೆಕ್ಕ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಆಡಳಿತ ಮಂಡಳಿಯ ಮಾತು ಕೇಳಿ ನಾನು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.